ಆಯಾಮಗಳು ಕತೆಗೆ ತಟ್ಟದೇ, ಮೂಲ ಕತೆಯೇ ಓದುಗರ ಮನಸ್ಸಿಗೆ ತಟ್ಟಲಿ ಎನ್ನುವ ಕಾರಣಕ್ಕೆ ಒಂದು ದೂರವನ್ನು ಕಾಯ್ದಿರಿಸಿಕೊಳ್ಳುವುದಕ್ಕೆ ಇದು ಸಹಾಯಕವಾಗಿರುತ್ತದೆ. ಹಾಗೇ, ಹೈದರಾಬಾದ್ ನನಗೆ ಇಷ್ಟವಾದ ಒಂದು ಭಿನ್ನ ಸಂಸ್ಕೃತಿಯನ್ನು ಪ್ರತಿನಿಧಿಸುವ ಜಾಗ. ನನ್ನ ಸಾಹಿತ್ಯ ಬೆಳೆಯುವ ಅವಸ್ಥೆಯಲ್ಲಿದ್ದಾಗ ಪ್ರೋತ್ಸಾಹಿಸಿ ಹೆಮ್ಮೆಪಟ್ಟ ಆಪ್ತ ಗೆಳೆಯರ ಜಾಗ. ಈಚಿನ ಸರಣಿ ಕತೆಗಳು ಮೈಸೂರು ಮುಂಬೈಗಳ ನಡುವೆ ಇವೆಯಾದರೂ ನನ್ನ ಕಥನ ಕರ್ಮಭೂಮಿ ಹೈದರಾಬಾದಿಗೇ ಮರಳುತ್ತದೆ ಎಂದು ನನಗನ್ನಿಸುತ್ತದೆ.

ಈಗಲೂ ಕಾಗದದ ಮೇಲೆ ಶಾಯಿಯನ್ನುಪಯೋಗಿಸುತ್ತಾ ಕತೆ ಬರೆಯುವುದು ನನಗೆ ಇಷ್ಟವಾದ ಪ್ರಕ್ರಿಯೆ. ಮನಸ್ಸಿನಲ್ಲಿ ಓಡುವ ವಿಚಾರಗಳ ತೀವ್ರತೆಗೆ, ಕತೆ ಬರೆಯಲು ಬೇಕಿರುವ ಸಾವಧಾನಕ್ಕೂ ಸಮನ್ವಯವನ್ನು ಕಾಪಾಡುವುದಕ್ಕೆ ಈ ಪ್ರಕ್ರಿಯೆ ಪೂರಕವಾಗುತ್ತದೆ. ಸಾಮಾನ್ಯವಾಗಿ ಮೊದಲ ಕರಡು ಕಾಗದದ ಮೇಲೆಯೇ ಕಟ್ಟುತ್ತೇನೆ. ನಂತರ ಅದನ್ನು ಕಂಪ್ಯೂಟರಿನಲ್ಲಿ ಕುಟ್ಟುತ್ತೇನೆ. ಒಂದು ಕತೆಯನ್ನು ಕೂತು ಒಂದೇ ಬಾರಿ ಮುಗಿಸಿದ್ದಿಲ್ಲ. ಒಂದೆರಡು ಪ್ಯಾರಾಗಳಿಗಿಂತ ಹೆಚ್ಚು ಒಮ್ಮೆಗೆ ಬರೆಯುವುದಿಲ್ಲ. ಬರವಣಿಗೆಯ ನಡುವೆ ಸಾಕಷ್ಟು ಚಹಾ, ಒಂದಿಷ್ಟು ನಡಿಗೆ, ನಡುವೆ ಓದು, ಎಲ್ಲವೂ ಸಾಗುತ್ತಿರುತ್ತದೆ. ಸಾಮಾನ್ಯವಾಗಿ ಕತೆ ಬರೆಯಲು ಪ್ರಾರಂಭಿಸಿದಾಗ ಅದಕ್ಕೊಂದು ಚೌಕಟ್ಟಿರುತ್ತದೆ, ಆದರೆ ಅದು ಬೆಳೆಯುತ್ತಾ ತನ್ನದೇ ಜೀವವನ್ನು, (ಅನೇಕ ಬಾರಿ) ನಾನು ಊಹಿಸಿದ್ದಕ್ಕಿಂತ ಭಿನ್ನವಾಗಿ ಬೆಳೆದದ್ದನ್ನು ನಾನು ಬೆರಗಿನಿಂದ ಕಂಡಿದ್ದೇನೆ. ಎಷ್ಟೋ ಬಾರಿ ನನ್ನ ಕತೆಯು ನನಗರಿವಿಲ್ಲದಂತೆಯೇ ಒಂದು ರೋಚಕ ತಿರುವನ್ನು ಪಡೆಯುವುದನ್ನೂ, ಅದರಿಂದ ಘನವಾಗುವುದನ್ನೂ ಕಂಡಾಗ ಎಲ್ಲೋ ಒಂದು ದೈವೀಶಕ್ತಿಯಿರಬಹುದೇನೋ ಎನ್ನುವ ಅನುಮಾನ ದೇವರನ್ನು ನಂಬದ ನನಗೆ ಬಂದದ್ದಿದೆ.

ಪ್ರತೀಕತೆಯನ್ನು ಬರೆದ ಕೂಡಲೇ ನಾಲ್ಕೈದು ಆಪ್ತರಿಗೆ ತೋರಿಸುತ್ತೇನೆ. ಹಿಂದೆ ಅದನ್ನು ಗಟ್ಟಿಯಾಗಿ ಓದುವ ಪ್ರಕ್ರಿಯೆಯಿತ್ತು. ಆದರೆ ಈಗ ನಮ್ಮ ನಮ್ಮ ಕೆಲಸ ಕಾರ್ಯಗಳಿಂದಾಗಿ ಪಟ್ಟಾಂಗ ಹೊಡೆಯಲು ಕೂರುವುದಿಲ್ಲವಾದ್ದರಿಂದ ಹೈದರಾಬಾದಿನಲ್ಲಿದ್ದ ಈ ಬಹಿರಂಗ ಓದಿನ ಪ್ರಕ್ರಿಯೆ ಮುಂದುವರೆದಿಲ್ಲ. ಆದರೂ ನನ್ನ ಮಡದಿ ಕೇಳುವ ಮೂಡಿನಲ್ಲಿದ್ದರೆ ಇಬ್ಬರಿಗೂ ಸಮಯವಿದ್ದರೆ ಓದುತ್ತೇನೆ. ಕತೆಯನ್ನು ಗಟ್ಟಿಯಾಗಿ ಓದಿದಾಗ ಅದರ ನಿರೂಪಣೆಯಲ್ಲಿರಬಹುದಾದ ಗೋಜಲುಗಳು ತಕ್ಷಣಕ್ಕೆ ಕಾಣುತ್ತವೆ. ನಾನು ಕತೆಯನ್ನು ಬರೆದು ತೋರಿಸುವ ಈ ಆಪ್ತರು ಕತೆಯನ್ನು ಹೇಗೆ ಸ್ವೀಕರಿಸಿದ್ದಾರೆ ಎನ್ನುವುದು ನನಗೆ ಮುಖ್ಯ. ಹಲವು ಬಾರಿ ಆಪ್ತರಿಗೆ ಹಿಡಿಸದ ಕತೆಗಳನ್ನು ಕೈಬಿಟ್ಟದ್ದೂ ಇದೆ. ಒಟ್ಟಾರೆ ಬಂದ ಪ್ರತಿಕ್ರಿಯೆಯ ಆಧಾರದ ಮೇಲೆ ಕತೆಯನ್ನು ಪರಿಷ್ಕರಿಸುವ ಕೆಲಸ ಮಾಡುತ್ತೇನೆ. ಪರಿಷ್ಕರಿಸಿ ಪ್ರಕಟಣೆಗೆ ಕಳುಹಿಸಿದ ನಂತರ ನನಗೂ ಕತೆಗೂ ಒಂದು ದೂರ ಏರ್ಪಾಟಾಗುತ್ತದೆ. ಅಲ್ಲಿಂದ ಮುಂದಕ್ಕೆ ಅದು ನನ್ನ ಕತೆಯಲ್ಲ ಎನ್ನುವಂತೆಯೇ ಅದನ್ನು ನಾನು ನೋಡುತ್ತೇನೆ. ಈ ವಿಷಯದಲ್ಲಿ ಮಾತ್ರ ನಾನು ಇಷ್ಟಪಡುವ ಕತೆಗಾರ ಯಶವಂತ ಚಿತ್ತಾಲರಿಗಿಂತ ನಾನು ತಂಬಾ ಭಿನ್ನ. ಚಿತ್ತಾಲರು ತಮ್ಮ ಕತೆಯನ್ನು ಒಂದು ಮುದ್ರಣದಿಂದ ಮತ್ತೊಂದು ಮುದ್ರಣಕ್ಕೆ ಹೋಗುವಷ್ಟರಲ್ಲಿ ತಿದ್ದುವುದೂ ಇತ್ತು. ಆದರೆ ನಾನು ಕತೆಯಲ್ಲಿರಬಹುದಾದ ಅಚ್ಚಿನದೋಷಗಳನ್ನೂ ಅಂಟಿಸಿಕೊಳ್ಳುವುದಿಲ್ಲ. ಅದು ಪ್ರಕಟವಾದಕೂಡಲೇ ಅದೊಂದು ಸಾರ್ವಜನಿಕ ಆಸ್ತಿ ಅನ್ನುವುದು ನನ್ನ ಭಾವನೆ. ಹೀಗಾಗಿಯೇ ನನ್ನ ಕತೆಯನ್ನಾಧರಿಸಿ ಕಿರು ಚಿತ್ರಗಳನ್ನು ಮಾಡಿ ಕತೆಯ ಆಶಯವನ್ನೇ ತಿರುಚಿದಾಗಲೂ ನನಗೆ ಹೆಚ್ಚಿನ ನೋವಾಗುವುದಿಲ್ಲ. ಅದೇ ರೀತಿ ಈ